# ಹಟದಿಂದ ಸಾಧಿಸುವ ಛಲಗಾತಿ ಪ್ರೇಮ



**ಪ್ರಿಯಾ ಜೆ. ಆಚಾರ್**

ಕಲರ್ಸ್ ಕನ್ನಡದ 'ಪ್ರೇಮಕಾವ್ಯ'ದ ಪ್ರೇಮ

◆ **ಸಿನಿಮಾ–ಸೀರಿಯಲ್ ಅಭಿನಯದ ಅನುಭವ ಹೇಗಿದೆ?**

ತುಂಬ ಚೆನ್ನಾಗಿದೆ ಎಂದು ನನಗೆ ಅನ್ನಿಸುತ್ತದೆ. ಅಭಿನಯ ಜಗತ್ತಿನಲ್ಲಿ ನಾನು ಇನ್ನೂ ಆರಂಭದ ಹಂತದಲ್ಲಿಯೇ ಇದ್ದೇನೆ. ಈ ಕ್ಷೇತ್ರಕ್ಕೆ ಬಂದು ಬರೀ ಐದು ವರ್ಷಗಳು ಕಳೆದಿವೆ. ಈ ಎರಡೂ ರಂಗದಲ್ಲಿ ಅಂತಹ ವ್ಯತ್ಯಾಸ ಇದೆ ಎನ್ನುವುದನ್ನು ನಾನು ಗುರುತಿಸಿಲ್ಲ. ತೆರೆ ಯಾವುದೇ ಆದರೂ ಪಾತ್ರದಲ್ಲಿ ಭಿನ್ನತೆ ಇರಬೇಕು ಎನ್ನುವುದನ್ನು ಹುಡುಕುತ್ತಿರುತ್ತೇವೆ. ಈ ಪಾತ್ರಕ್ಕಿಂತ ಮುಂದಿನ ಪಾತ್ರ ಸವಾಲಿನಿಂದ ಕೂಡಿರಬೇಕು ಎನ್ನುವ ಆಸೆ ನಮಗಿರುತ್ತದೆ. ಹಿರಿತೆರೆ–ಕಿರುತೆರೆ ಎರಡರಲ್ಲೂ ನಟರಿಗೆ ಪ್ರೇಕ್ಷಕರ ಪ್ರೀತಿ ಸಿಗುತ್ತದೆ. ಅದನ್ನು ಗಳಿಸಲು ನಮ್ಮ ಹಾದಿ ಹೇಗೆ ಇರಬೇಕು ಎನ್ನುವುದು ಮುಖ್ಯ ಆಗುತ್ತದೆ. ವಿಶೇಷವಾಗಿ ಕಿರುತೆರೆಯಲ್ಲಿ ಜನರ ಪ್ರೀತಿ ಎನ್ನುವುದು ಅವರ ಮನೆ ಮಕ್ಕಳಂತೆ ಸಿಗುತ್ತದೆ ಎನ್ನುವುದಕ್ಕೆ ಅನುಮಾನ ಇಲ್ಲ. ದಿನವೂ ಅವರ ಮನೆಗೆ ಹೋಗುವುದರಿಂದ ವೀಕ್ಷಕರು ತಮ್ಮವರು ಎಂಬ ಭಾವದಲ್ಲಿಯೇ ನಮ್ಮನ್ನು ಮಾತನಾಡಿಸುತ್ತಾರೆ. ಸಿನಿಮಾದಲ್ಲಿ ಬಳಗ ದೊಡ್ಡದಾಗಿ ಬೆಳೆಯುತ್ತದೆ. ಆದರೆ ನಾನು ಪ್ರಾಥಮಿಕ ಹಂತದಲ್ಲಿ ಇದ್ದೇನೆ. ಇನ್ನು ತುಂಬ ಕೆಲಸ ಮಾಡಬೇಕಿದೆ.

◆ **ಪ್ರೇಮ ಮತ್ತು ಕಾವ್ಯ ಪಾತ್ರಗಳ ತುಮುಲಗಳನ್ನು ಹೇಗೆ ಗ್ರಹಿಸುತ್ತೀರಿ?**

ನನಗೆ ಓದು ಅಷ್ಟಕ್ಕಷ್ಟೇ. ಮನೆಯ ಕೆಲಸವನ್ನು ನೀಟಾಗಿ ನಿರ್ವಹಿಸುತ್ತೇನೆ. ಅದರ ಜೊತೆ ಕೃಷಿ ಚಟುವಟಿಯಲ್ಲಿ ಆಸಕ್ತಿಯನ್ನು ತೋರಿಸುತ್ತೇನೆ. ನನ್ನ ತಂಗಿ ಕಾವ್ಯಳಿಗೆ ಓದಿನ ಪ್ರೀತಿ ಹೆಚ್ಚಿದೆ. ವಿಜ್ಞಾನಿ ಆಗಬೇಕು ಎನ್ನುವುದು ಅವಳ ಮಹತ್ವಾಕಾಂಕ್ಷೆ. ಸ್ವಭಾವದಲ್ಲೂ ಆಕೆ ನನ್ನಷ್ಟು ಒರಟಾಗಿಲ್ಲ. ಮೃದು ಮನೋಭಾವದ ಅವಳು ಎಲ್ಲರ ಜೊತೆ ಗಟ್ಟಿ ಬಾಂಧವ್ಯವನ್ನು ಹೊಂದಿದ್ದಾಳೆ. ನಾನು ಛಲಗಾತಿ, ಅಂದುಕೊಂಡಿದ್ದನ್ನು ಹಟ ಹಿಡಿದು ಮಾಡುತ್ತೇನೆ. ಸ್ವಭಾವತಃ ಇಬ್ಬರೂ ಒಳ್ಳೆಯವರು. ಕಾವ್ಯಳ ಆಸೆ ಪೂರೈಸಲು ನಮ್ಮ ಕುಟುಂಬದವರು ಬೆಂಬಲಕ್ಕೆ ನಿಂತಿದ್ದೇವೆ. ಇನ್ನೇನು ಸ್ವಲ್ಪ ದಿನಗಳಲ್ಲಿ ನನ್ನ ತಂಗಿ ವಿಜ್ಞಾನಿಯಾಗುತ್ತಾಳೆ.

◆ **ಅಭಿನಯ ನಿಮ್ಮನ್ನು ಹೇಗೆ ಕರೆದುಕೊಂಡು ಬಂತು?**

ಶಾಲೆಯ ದಿನಗಳಲ್ಲೇ ಸಾಂಸ್ಕೃತಿಕ ಚಟುವಟಿಕೆಯ ಕಡೆ ನನಗೆ ಒಲವು ಹೆಚ್ಚಿತ್ತು. ಯಾವುದೇ ಸ್ಪರ್ಧೆ, ಮನರಂಜನೆಯ ಕಾರ್ಯಕ್ರಮಗಳು ಇದ್ದರೆ ಅಲ್ಲಿ ಮೊದಲಿಗಳಾಗಿ ನಿಂತಿರುತ್ತಿದ್ದೆ. ಅದು ಕಾಲೇಜು ಜೀವನದಲ್ಲೂ ಮುಂದುವರಿಯಿತು. ಅದೇ ಇಲ್ಲಿಯತನಕ ಕರೆದುಕೊಂಡು ಬರುತ್ತದೆ ಎನ್ನುವುದು ಗೊತ್ತಿರಲಿಲ್ಲ. ಆ ವೇಳೆ ಸಾಮಾಜಿಕ ಮಾಧ್ಯಮಗಳನ್ನು ಚೆನ್ನಾಗಿ ಬಳಸಿಕೊಂಡೆ. ಕೆಲವು ಹಾಡು ಅಥವಾ ಡೈಲಾಗ್‌ಗಳಿಗೆ ವಿಡಿಯೊಗಳನ್ನು ಮಾಡುತ್ತಿದ್ದೆವು. ಅದರಿಂದ ಅವಕಾಶಗಳು ತೆರೆದುಕೊಂಡವು. ಆಗಲೇ ನಾನು ಕೆಲವು ಸಿನಿಮಾಗಳಿಗೆ ಆಡಿಷನ್ ಕೊಟ್ಟಿದ್ದೆ. ನನ್ನ ಗುರಿ ಇದು ಎನ್ನುವ ಆಲೋಚನೆ ಮಾತ್ರ ಇರಲಿಲ್ಲ. ಕಲರ್ಸ್‌ನ 'ಗಟ್ಟಿಮೇಳ'ದಲ್ಲಿ ಅವಕಾಶ ಸಿಕ್ಕ ನಂತರ ನನ್ನ ಅದೃಷ್ಟದ ಬಾಗಿಲು ತೆರೆಯಿತು. ಮನಪೂರ್ವಕವಾಗಿ ಅಭಿನಯವನ್ನೇ ಮಾಡಬೇಕು ಎಂದು ನಿರ್ಧರಿಸಿದೆ.

◆ **ನಿಮ್ಮ ಲವ್ ಸ್ಟೋರಿ ಹೇಗೆ ಆರಂಭವಾಯಿತು?**

ನಮ್ಮಿಬ್ಬರ ಪರಿಚಯಕ್ಕೆ ವೇದಿಕೆಯನ್ನು ಕೊಟ್ಟಿದ್ದು ಕಿರುತೆರೆ. ನಾವಿಬ್ಬರು 'ಧಮಾಕ' ಸಿನಿಮಾದಲ್ಲಿ ಮತ್ತೆ ಭೇಟಿಯಾದೆವು. ಅದು ನಮ್ಮಲ್ಲಿ ಮತ್ತಷ್ಟು ಆತ್ಮೀಯತೆಯನ್ನು ಬೆಳೆಸಿತು. ಇಲ್ಲಿ ನಮ್ಮೊಳಗೆ ಪ್ರೀತಿಯ ಎಳೆ ಇದೆ ಎನ್ನುವುದು ಗೊತ್ತಾಯಿತು. ಆ ಸ್ನೇಹ ಮುಂದುವರಿಯಿತು. ಹಾಗೆಯೇ ನಮ್ಮ ಪೋಷಕರಿಗೆ ಈ ವಿಷಯ ತಿಳಿಸಿದೆವು. ಎರಡೂ ಕಡೆಯವರು ಪ್ರೀತಿಯಿಂದ ನಮ್ಮನ್ನು ಒಂದು ಮಾಡಿದರು. ಅವರಿಗೆ ಧನ್ಯವಾದಗಳನ್ನು ಹೇಳಬೇಕು. ನಾವಿಬ್ಬರೂ ಒಂದೇ ರಂಗದಲ್ಲಿ ವೃತ್ತಿಯನ್ನು ಕಂಡುಕೊಂಡಿದ್ದರಿಂದ ಒಬ್ಬರಿಗೊಬ್ಬರು ಪ್ರೋತ್ಸಾಹ ಮತ್ತು ಬೆಂಬಲಕ್ಕೆ ನಿಂತು ಕೆಲಸ ಮಾಡುತ್ತಿದ್ದೇವೆ. ಪತಿ ಸಿದ್ದು ಮೂಲಿಮನಿ ಧಾರವಾಡ ಸೀಮೆಯವರು. ನಾನು ಹುಟ್ಟಿದ್ದು ಚಿಕ್ಕಮಗಳೂರು, ಬೆಳೆದಿದ್ದು ದಾವಣಗೆರೆ. ಅಪ್ಪ–ಅಮ್ಮ ಅಲ್ಲೇ ಇದ್ದಾರೆ. ಅತ್ತೆ–ಮಾವ ನಮ್ಮ ಜೊತೆ ಬೆಂಗಳೂರಿನಲ್ಲಿದ್ದಾರೆ.

◆ **'ಪ್ರೇಮಕಾವ್ಯ'ದ ಬಗ್ಗೆ ನೀವೇನು ಹೇಳುತ್ತೀರಿ?**

ಕಲರ್ಸ್ ಕನ್ನಡವೇ ನನಗೆ ಮೊದಲ ಅವಕಾಶವನ್ನು ಕೊಟ್ಟಿದೆ. 'ನಡುವೆ ಅಂತರವಿರಲಿ' ಎಂಬ ಸುಂದರ ಸಿನಿಮಾವನ್ನು ಕೊಟ್ಟ ರವೀಂದ್ರ ಅವರು ಕಾಲ್ ಮಾಡಿದರು. ಅವರ ಮಾಹಿತಿಪೂರ್ಣ ಆ ಸಿನಿಮಾ ನೋಡಿ ಖುಷಿಪಟ್ಟಿದ್ದೆ. ಅವರು 'ಗಟ್ಟಿಮೇಳ'ಕ್ಕೆ ಆಯ್ಕೆ ಆಗಿರುವುದಾಗಿ ತಿಳಿಸಿದರು. ಅದು ನನಗೆ ಒಳ್ಳೆಯ ಹೆಸರು ತಂದುಕೊಟ್ಟಿತು. 'ಪ್ರೇಮಕಾವ್ಯ' ಹೊಸ ತಂಡ ರೂಪಿಸುತ್ತಿದೆ. ಅದರಲ್ಲಿ ನಾನು ಮಾಡುತ್ತಿದ್ದೇನೆ ಎನ್ನುವುದೇ ಸಂತೋಷದ ಸಂಗತಿ. ನಮ್ಮ ತಂಡದಲ್ಲಿ ಕೌಟುಂಬಿಕ ವಾತಾವರಣ ಇದೆ. ನಮ್ಮ ಧಾರಾವಾಹಿ ಕೂಡ ಕೌಟುಂಬಿಕ ಕಥೆಯನ್ನು ನಿರೂಪಿಸುತ್ತಿದೆ.

■ **ರಾಘವೇಂದ್ರ ಕೆ.**